ಸಿ.ಡಿ.ಎಸ್. ನಾಲೆಯ ಕುರಿತು

470 - ಶ್ರೀಮತಿ ದಮಯಂತಿ ಬೋರೇಗೌಡ (ಶ್ರೀರಂಗಪಟ್ಟಣ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿ.ಡಿ.ಎಸ್. ನಾಲೆಯ ಮೇಲೆ ಮಂಟಪ ಮಾದರಿಯ ಕುಸಿದಿರುವ ಸೇತುವೆಗಳೆಷ್ಟು?

ಆ) ಅತಿ ಜರೂರಾಗಿ ರಿಪೇರಿ ಮಾಡಬೇಕಾಗಿರುವ ಸೇತುವೆಗಳೆಷ್ಟು?

ಇ) ಈ ವಿಚಾರದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮ.

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಮೂರು

ಆ) ಇಪ್ಪತ್ತಾರು

ಇ) ಹೊಸದಾದ ಸೇತುವೆಗಳನ್ನು ನಿರ್ಮಿಸುವ ಕೆಲಸವನ್ನು ಕಾವೇರಿ ಅಣೆಕಟ್ಟಿನ ನಾಲೆಗಳ ಆಧುನೀಕರಣ ಯೋಜನೆಯಡಿ ಕೈಗೊಳ್ಳುವ ಕಾರ್ಯಕ್ರಮವಿದೆ.

ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಸಾಮರ್ಥ್ಯದ ಬಗ್ಗೆ

548 - ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಇಂಧನ ರಾಜ್ಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ನಿರ್ಮಿಸಲು ಉದ್ದೇಶಿಸಿರುವ ತಾಪ ವಿದ್ಯುತ್ ಯೋಜನೆಗಳು ಯಾವುವು? ಪ್ರತಿಯೊಂದು ಸಾಮರ್ಥ್ಯವೇನು ಮತ್ತು ಯಾವ ಸ್ಥಳಗಳಲ್ಲಿ ನಿರ್ಮಿಸಲಾಗುವುದು?

ಆ) ಈ ಸ್ಥಾವರಗಳನ್ನು ನಿರ್ಮಿಸಲು ರಾಷ್ಟ್ರೀಯ ಅಥವಾ ಅಂತರರಾಷ್ಟ್ರೀಯ ವ್ಯಕ್ತಿ ಅಥವಾ ಸಂಸ್ಥೆಗಳು ಯಾರಾದರೂ ಮುಂದೆ ಬಂದಿದ್ದಾರೆಯೇ, ಬಂದಿದ್ದರೆ ಅವರ ಪ್ರಸ್ತಾಪಗಳ ವಿವರಗಳನ್ನು ಕೊಡುವುದು ಈ ಸ್ಥಾವರಗಳಿಂದ ಉತ್ಪತ್ತಿಯನ್ನು ವಿದ್ಯುತ್ ಸಾಗಾಣಿಕೆ ಮತ್ತು ವಿತರಣೆ ಮಾಡುವುದರ ಬಗ್ಗೆ ವಿವರ ಒದಗಿಸುವುದು?

ಶ್ರೀ ವಿ. ಮುನಿಯಪ್ಪ (ಇಂಧನ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ ನಿರ್ಮಿಸಲು ಉದ್ದೇಶಿಸಿರುವ ತಾಪ ವಿದ್ಯುತ್ ಯೋಜನೆಗಳು ಈ ಕೆಳಗಿನಂತಿವೆ :

1) ರಾಯಚೂರು ಘಟಕ 5 ಮತ್ತು 6 ಸಾಮರ್ಥ್ಯ ರೂ 210 ಮೆ.ವ್ಯಾ.

2) ಹೊಸಪೇಟೆ ಕೇಂದ್ರ (ಮೊದಲನೇ ಹಂತ) ಸಾಮರ್ಥ್ಯ 500 ಮೆವ್ಯಾ.

3) ಚಮಲಾಪುರ (ಮೈಸೂರಿನ ಹತ್ತಿರ) ಕೇಂದ್ರ (ಮೊದಲನೇ ಹಂತ) ಸಾಮರ್ಥ್ಯ 500 ಮೆವ್ಯಾ

4) ಮಂಗಳೂರು ಸಾಮರ್ಥ್ಯ 1000ಮೆವ್ಯಾ

ಆ) ಬಂದಿದ್ದಾರೆ. ಈ ಸ್ಥಾವರಗಳನ್ನು ನಿರ್ಮಿಸಲು ರಾಯಚೂರಿನ 5ನೇ ಮತ್ತು 6ನೇ ಘಟಕಗಳನ್ನು ಪಬ್ಲಿಕ್ ಪವರ್ ಇಂಟರ್‌ನ್ಯಾಷನಲ್ (ಯುಎನ್‌ಎ) ರವರ ಜೊತೆ ಎಂ.ಓ.ಯು. ಕರ್ನಾಟಕ ಸರ್ಕಾರ ಮಾಡಿದೆ ಇದೇ ರೀತಿ ಹೊಸಪೇಟೆ ವಿದ್ಯುತ್ ಸ್ಥಾವರಕ್ಕೆ ಹೆಚ್.ಓ.ಕೆ. (ಯು.ಎಸ್.ಎ) ರವರೊಡನೆ ಎಂಒಯು ಸರ್ಕಾರ ಮಾಡಿಕೊಂಡಿದೆ. ಚಮಲಾಪುರಕ್ಕೆ ಇನ್ನು ಯಾವ ಸಂಸ್ಥೆಗಳು ಎಂಒಯು ಮಾಡಿಕೊಂಡಿಲ್ಲ. ಮಂಗಳೂರಿನಲ್ಲಿ 1000 ಮೆವ್ಯಾ ಸಾಮರ್ಥ್ಯದ ಶಾಖೋತ್ಪನ್ನ ವಿದ್ಯುತ್ ಕೇಂದ್ರವನ್ನು